## 34. ಜಿಟಿಟಿಸಿಯಲ್ಲಿ ವೆಂಟಿಲೇಟರ್ ಬಿಡಿಭಾಗ ಅಭಿವೃದ್ಧಿ

ಬಿಇಎಲ್ ಸಂಸ್ಥೆಗೆ 30 ಸಾವಿರ ವೆಂಟಿಲೇಟರ್ ಪೂರೈಸಲು ಕೇಂದ್ರ ಸರ್ಕಾರ ಸೂಚನೆ ನೀಡಿದ್ದು, ಇದಕ್ಕೆ ಅಗತ್ಯವಾದ ಬಿಡಿಭಾಗವೊಂದನ್ನು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ಅಭಿವೃದ್ಧಿಪಡಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಾ:ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಜರ್ಮನಿ ಅಥವಾ ಜಪಾನ್‌ನಿಂದ ಆಮದು ಮಾಡಿಕೊಳ್ಳಬೇಕಾಗಿದ್ದ ಹೈ ಫ್ಲೋ ಮತ್ತು ಲೋ ಫ್ಲೋ ಪ್ರೋಪೋಷನಲ್ ವಾಲ್ವ್‌ಗಳಿಗೆ ಕ್ರಮವಾಗಿ ರೂ.20 ಸಾವಿರ ಮತ್ತು ರೂ.15 ಸಾವಿರ ಬೆಲೆ ಇತ್ತು. ಇನ್ನು ಮುಂದೆ ಇದನ್ನು ಜಿಟಿಟಿಸಿಯಲ್ಲೇ ತಯಾರಿಸಲಾಗುತ್ತದೆ. ಇದರ ಗುಣಮಟ್ಟವನ್ನು ದೃಢೀಕರಿಸಲಾಗಿದೆ. ವೆಂಟಿಲೇಟರ್‌ಗೆ ಸುಮಾರು 300 ರಷ್ಟು ಬಿಡಿಭಾಗಗಳು ಬೇಕಾಗುತ್ತದೆ. ದೇಶಿಯವಾಗಿಯೇ ಇವುಗಳ ಉತ್ಪಾದನೆಯಾಗುತ್ತಿದ್ದು, ಎಲ್ಲವನ್ನೂ ಸೇರಿಸಿಕೊಂಡು ಬಿಇಎಲ್ ಸಂಸ್ಥೆ 3 ರಿಂದ 6 ತಿಂಗಳೊಳಗೆ ಇಷ್ಟೂ ವೆಂಟಿಲೇಟರ್‌ಗಳನ್ನು ಪೂರೈಸಲಿದೆ ಎಂದರು.

ಗ್ರಾಮೀಣ ಜೀವನೋಪಾಯ ಸಂವರ್ಧನಾ ಇಲಾಖೆಯು ಕಳೆದ ಫೆಬ್ರವರಿಯಲ್ಲೇ ಸ್ವಸಹಾಯ ಸಂಘಗಳಿಂದ ಮುಖಗವಸು ಸಿದ್ಧಪಡಿಸುವ ಯೋಜನೆ ರೂಪಿಸಿ, ಲಕ್ಷಾಂತರ ಮುಖಗವಸು ತಯಾರಿಯಲ್ಲೇ ಸ್ತ್ರೀ ಶಕ್ತಿ ಸಂಘಗಳು ತೊಡಗಿದ್ದು, ರಾಜ್ಯದ ಪ್ರತಿಯೊಬ್ಬರಿಗೂ ಪುನರ್ ಬಳಕೆ ಮಾಡಬಹುದಾದ ಮುಖಗವಸು ರೂ.10 ರಿಂದ ರೂ.20ರ ದರದಲ್ಲಿ ದೊರಕಿದೆ. ವಿವಿಧ ಜಿಲ್ಲಾ ಪಂಚಾಯತಿಗಳ ಸಿಇಒಗಳು ಮತ್ತು ಸ್ವಸಹಾಯ ಗುಂಪುಗಳ ಸದಸ್ಯರೊಂದಿಗೆ ವಿಡಿಯೋ ಸಂವಾದ ನಡೆಸಿ ಮುಖಗವಸು ತಯಾರಿಸುವ ಕಾರ್ಯಕ್ಕೆ ಉಪ ಮುಖ್ಯಮಂತ್ರಿ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:23.04.2020